ಓ ಎಸ್ ನಂ.31/2023
ಡಿ.ಡಬ್ಲ್ಯೂ-1 ನಳಿನಿ ಗಂಡ ಮನೋಹರ ಪತಂಗೆ

**(ಇಂದು ದಿನಾಂಕಃ 03-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಕೆ ಪಿ ವಕೀಲರಿಂದ.

ಗುರುನಾಥ ಮತ್ತು ತನುಬಾಯಿರವರು ನನ್ನ ತಂದೆ-ತಾಯಿಯಾಗಿರುತ್ತಾರೆ. ನಮ್ಮ ತಂದೆಗೆ ಪ್ರಮೀಳಾ, ನಳಿನಿ ಮತ್ತು ಮಂಗಲ ಎಂಬ ೩ ಜನ ಹೆಣ್ಣುಮಕ್ಕಳು ಮತ್ತು ವಿಲಾಸ ಮತ್ತು ರಾಜೇಶ ಎಂಬ ೨ ಜನ ಗಂಡು ಮಕ್ಕಳು ಇರುತ್ತೇವೆ. ನನ್ನ ಸಹೋದರಿ ಪ್ರಮೀಳಾ ಈಗ ಮೃತಳಾಗಿರುತ್ತಾಳೆ. ದಾವಾ ಜಮೀನುಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಅಫಜಲಪೂರದಲ್ಲಿ ನಮಗೆ ಒಂದು ಮನೆ ಕೂಡಾ ಇದೆ ಎಂದರೆ ಸರಿ. ದಾವಾ ಜಮೀನುಗಳು ಮೊದಲು ನಮ್ಮ ತಂದೆಯ ಹೆಸರಿಗೆ ಇದ್ದವು, ಈಗ ನನ್ನ ಸಹೋದರರಾದ ರಾಜೇಶ, ವಿಲಾಸ ಮತ್ತು ವಿಲಾಸರವರ ಮಗನಾದ ನಿಖಿಲ್ ರವರ ಹೆಸರಿನಲ್ಲಿರುತ್ತವೆ. ನನ್ನ ಸಹೋದರ ಮತ್ತು ಸಹೋದರಿಯರ ಮಧ್ಯ ಮತ್ತು ನನ್ನ ಮಧ್ಯ ಯಾವುದೇ ವಿಭಾಗ ಪತ್ರ ಆಗಿರುವುದಿಲ್ಲ. ನಾನು ಮತ್ತು ವಾದಿ ನಮ್ಮ ಪಾಲು ನೀಡುವಂತೆ ೧ನೇ ಪ್ರತಿವಾದಿ ವಿಲಾಸರವರನ್ನು ಕೇಳಿರುತ್ತೇವೆ ಆಗ ಅವರು ಪಾಲು ಮಾಡಿಕೊಡುವುದಿಲ್ಲ ಎಂದು ಹೇಳಿರುತ್ತಾರೆ.

೨. ವಾದಿಗೆ ಮತ್ತು ನನಗೆ ದಾವಾ ಆಸ್ತಿಗಳಲ್ಲಿ ಪಾಲು ಬರಬೇಕು ಎಂದರೆ ಸರಿ. ಈ ದಾವೆ ಹಾಕಿದ ನಂತರ ನಾನು ೧ನೇ ಪ್ರತಿವಾದಿಯನ್ನು ಭೇಟಿಯಾಗಿರುವುದಿಲ್ಲ. ನನ್ನ ಸಹೋದರಿ ಪ್ರಮೀಳಾ ಈಗ ಮೃತಳಾಗಿದ್ದು, ಅವಳಿಗೆ ದಿನೇಶ ಮತ್ತು ದೀಪ್ತಿ ಎಂಬ ೨ ಜನ ಮಕ್ಕಳಿರುತ್ತಾರೆ. ೧ ಮತ್ತು ೨ನೇ ಪ್ರತಿವಾದಿಯರು ಮುಂಬೈಯಲ್ಲಿ ವಾಸವಿರುತ್ತಾರೆ.

ದಾವಾ ಜಮೀನುಗಳನ್ನು ೧ನೇ ಪ್ರತಿವಾದಿ ಬೇರೆಯವರಿಗೆ ಸಾಗುವಳಿ ಮಾಡಲು ಬಾಡಿಗೆಯಿಂದ ನೀಡಿರುತ್ತಾರೆ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಪಾಲು ಮತ್ತು ಆದಾಯ ನೀಡಿರುವುದಿಲ್ಲ. ನಮ್ಮ ತಂದೆ ಸುಮಾರು ೮-೯ ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ನಮ್ಮ ತಾಯಿ ಸುಮಾರು ೨ ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ನನ್ನ ತಂದೆ-ತಾಯಿ ಇದ್ದಾಗಲೂ ಕೂಡಾ ವಾದಿಗೆ ಯಾವುದೇ ಪಾಲು ನೀಡಿರುವುದಿಲ್ಲ. ತಾಯಿ ಇರುವವರೆಗೆ ಪಾಲು ನೀಡುತ್ತೇನೆ ಎಂದು ಹೇಳುತ್ತಾ ಬಂದು ಮುಂದೆ ನಮಗೆ ಪಾಲು ನೀಡಿರುವುದಿಲ್ಲ.

೧ ಮತ್ತು ೨ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.